KAMS610003072018

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,**

**ಪಿರಿಯಾಪಟ್ಟಣ**

ಉಪಸ್ಥಿತರುಃ

**ಶ್ರೀ ಧನುರಾಜ್ ಎಸ್.ಎಂ., ಬಿ.ಎ., ಎಲ್‌ಎಲ್‌ಬಿ.**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,

ಪಿರಿಯಾಪಟ್ಟಣ

**ಸಿ.ಸಿ.ಸಂಖ್ಯೆ.84/2018**

**ದಿನಾಂಕ:3 ನೇ ಆಗಸ್ಟ್ ಮಾಹೆ 2026 ರಂದು**

ಫಿರ್ಯಾದುದಾರರುಃ ಸರ್ಕಾರದ ಪರವಾಗಿ ಪಿರಿಯಾಪಟ್ಟಣ ಪೊಲೀಸ್ ಠಾಣಾ ಆರಕ್ಷಕರು, ಪಿರಿಯಾಪಟ್ಟಣ
(ಸಹಾಯಕ ಸರ್ಕಾರಿ ಅಭಿಯೋಜಕರು)

**ವಿರುದ್ಧ**

ಆರೋಪಿಃ ಮನು ಬಿನ್ ಚಂದ್ರ,
ವಯಸ್ಸು 25 ವರ್ಷ,
ವಾಸ.ಪಂಚವಳ್ಳಿ ಗ್ರಾಮ,
ಪಿರಿಯಾಪಟ್ಟಣ ತಾಲ್ಲೂಕು,
ಮೈಸೂರು ಜಿಲ್ಲೆ.
(ಆರೋಪಿ ಪರ ಶ್ರೀ ಜೆ.ಎಸ್.ಎನ್ , ವಕೀಲರು)

| | | |
|---|---|---|
| 1. | ಕೃತ್ಯ ನಡೆದ ದಿನಾಂಕ | 22.11.2017 |
| 2. | ಪ್ರಕರಣ ವರದಿಯಾದ ದಿನಾಂಕ | 23.11.2017 |
| 3. | ಫಿರ್ಯಾದುದಾರರ ಹೆಸರು | ಶ್ರೀ ಸ್ವಾಮಿ |

| | | |
|---|---|---|
| 4. | ಸಾಕ್ಷಿ ವಿಚಾರಣೆ ಪ್ರಾರಂಭವಾದ ದಿನಾಂಕ | 29.07.2026 |
| 6. | ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | 29.07.2026 |
| 7. | ಆರೋಪಿಗಳ ವಿರುದ್ದ ಮಾಡಲಾದ ಆರೋಪ | ಭಾ.ದಂ.ಸಂ.ಕಲಂ 341, 504, 323, 324 ಮತ್ತು 506 |
| 8. | ನ್ಯಾಯಾಧೀಶರ ಅಭಿಪ್ರಾಯ | ಆರೋಪಿ ಬಿಡುಗಡೆಗೆ ಅರ್ಹನಾಗಿರುತ್ತಾರೆ. |
| 9. | ಫಿರ್ಯಾದುದಾರರನ್ನು ಪ್ರತಿಧಿಸುವ ವಕೀಲರು | ಸ.ಸ.ಅ |
| 10. | ಆರೋಪಿಗಳನ್ನು ಪ್ರತಿನಿಧಿಸುವ ವಕೀಲರು | ಆರೋಪಿ ಪರ ಶ್ರೀ ಜೆ.ಎಸ್.ಎನ್ ವಕೀಲರು |

**(ಧನುರಾಜ್ ಎಸ್.ಎಮ್)**
**ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರ. ದ. ನ್ಯಾ ದಂ.**
**ಪಿರಿಯಾಪಟ್ಟಣ**

## ತೀರ್ಪು

ಪಿರಿಯಾಪಟ್ಟಣ ಪೊಲೀಸ್ ಠಾಣಾ ಆರಕ್ಷಕ ನಿರೀಕ್ಷಕರು ಆರೋಪಿ ವಿರುದ್ಧ ಕಲಂ 341, 504, 323, 324 ಮತ್ತು 506 ಐ ಪಿ ಸಿ ಅಡಿಯಲ್ಲಿ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2. ಅಭಿಯೋಜನೆಯ ಪ್ರಕರಣದ ಸಾರಾಂಶ ಈ ಕೆಳಗಿನಂತೆ ಇದೆ.**

ದಿನಾಂಕ.22.11.2017 ರಂದು ರಾತ್ರಿ 8.00 ಗಂಟೆ ಸಮಯದಲ್ಲಿ ಪಿರಿಯಾಪಟ್ಟಣ ಪೊಲೀಸ್ ಠಾಣಾ ಸರಹದ್ದು ಪಂಚವಳ್ಳಿ ಗ್ರಾಮದ ಮಹದೇವಪ್ಪರವರ

ಅಂಗಡಿ ಮನೆ ಮುಂದೆ ಹಾದು ಹೋಗಿರುವ ಪಂಚವಳ್ಳಿ ಕಡೆಮನುಗನಹಳ್ಳಿ ರಸ್ತೆಯ ಪೂರ್ವದ ಅಂಚಿನಲ್ಲಿ ಚಾಸಾ.1 ರವರು ನಡೆದುಕೊಂಡು ಮನೆಗೆ ಹೋಗುತ್ತಿದ್ದಾಗ ಆರೋಪಿಯು ಚಾಸಾ.1 ರವರನ್ನು ಅಡ್ಡಗಟ್ಟಿ ತನ್ನ ಚಿಕ್ಕಪ್ಪನ ಹತ್ತಿರ ಏನಂತ ತನ್ನ ವಿಚಾರವನ್ನು ಹೇಳಿದೆ ಬೋಳಿ ಮಗನೇ, ಸೂಳೇ ಮಗನೇ ಊರಿಂದ ಊರಿಗೆ ಬಂದು ಎಷ್ಟೊಂದು  ದಿಮಾಕು ಎಂಬಿತ್ಯಾದಿಯಾಗಿ ಬೈದು ಚಾಸಾ.1 ರವರ ಕತ್ತಿನ ಪಟ್ಟಿಯನ್ನು ಹಿಡಿದು ಎಳೆದಾಡಿ ಕೈಯಿಂದ ಕಪಾಲದ ಹತ್ತಿರ ಹೊಡೆದು ಕೆಳಕ್ಕೆ ಕೆಡವಿ ದೊಣ್ಣೆಯಿಂದ ಬಲಗಾಲಿನ ಮಂಡಿ ಹತ್ತಿರ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿ ನಂತರ ಚಾಸಾ.1 ರವರ ಮನೆ ಹತ್ತಿರ ಹೋಗಿ ಚಾಸಾ.2 ರವರಿಗೆ ನಿನ್ನ ಗಂಡ ಎಲ್ಲಿ ಲೋಫರ್ ಎಂದು ಅವಾಚ್ಯ ಶಬ್ದಗಳಿಂದ ಬೈದು ಕೈಗಳಿಂದ ಮೈಕೈ ಕಾಲುಗಳಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವುಂಟು ಮಾಡಿ ಇವತ್ತಲ್ಲ ನಾಳೇ ನಿಮ್ಮನ್ನು ಕೊಲೆ ಮಾಡದೇ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ  ಹಾಕಿರುತ್ತೀರಿ.

**3**. ದಿನಾಂಕ. 23.12.2017 ರಂದು ಎಂದು  ಚಾಸಾ.8-ಶ್ರೀನಿವಾಸ.ಟಿ.  ಪಿ ಎಸ್ ಐ ವರು ಚಾಸಾ.1- ಶ್ರೀ  ಸ್ವಾಮಿ  ರವರು ನೀಡಿದ ದೂರನ್ನು ಪಡೆದುಕೊಂಡು ಠಾಣಾ ಮೊಕದ್ದಮ್ಮೆ ಸಂಖ್ಯೆ.380/2017 ರಂತೆ ಭಾರತೀಯ ದಂಡ ಸಂಹಿತೆ  ಕಲಂ 341, 504, 323, 324 ಮತ್ತು 506 ರ  ರಡಿಯಲ್ಲಿ ಪ್ರಕರಣವನ್ನು ದಾಖಲಿಸಿ ಆರೋಪಿ ವಿರುದ್ಧ ಪ್ರಕರಣ ದಾಖಲಿಸಿ ಪಂಚನಾಮೆ ಮಾಡಿ ಸಾಕ್ಷಿದಾರರ ಹೇಳಿಕೆ ಪಡೆದುಕೊಂಡು ತನಿಖೆ ಪೂರ್ಣಗೊಂಡ ನಂತರ ಆರೋಪಿ  ವಿರುದ್ಧ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**4**. ಆರೋಪಿ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ವಕೀಲರ ಮುಖಾಂತರ ನ್ಯಾಯಾಲಯಕ್ಕೆ ಜಾಮೀನು ಅರ್ಜಿಯನ್ನು ಸಲ್ಲಿಸಿ ಜಾಮೀನನ್ನು ಪಡೆದುಕೊಂಡಿರುತ್ತಾರೆ. ಆರೋಪಿಗೆ ಅಭಿಯೋಜನೆಯವರ ದಾಖಲೆಗಳನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ.207 ರಡಿಯಲ್ಲಿ ಪೂರೈಸಲಾಗಿರುತ್ತದೆ. ಆರೋಪಿ ಮೇಲೆ ಮಾಡಿದ ಆರೋಪಕ್ಕೆ ದೋಷರೋಪಣಾ ಪಟ್ಟಿಯನ್ನು ಭಾರತೀಯ ದಂಡ ಸಂಹಿತೆ ಕಲಂ 341, 504, 323, 324 ಮತ್ತು 506 ರಂತೆ ರಚಿಸಿ ಓದಿ ಹೇಳಲಾಯಿತು. ಆರೋಪಿ ತಪ್ಪನ್ನು ಒಪ್ಪಿಕೊಳ್ಳದೆ ವಿಚಾರಣೆ ಆಗಬೇಕೆಂದು ಕೇಳಿದ ಕಾರಣ ಪ್ರಕರಣವನ್ನು ವಿಚಾರಣೆಗೆ ಮುಂದೂಡಲಾಯಿತು.

**5**. ಆರೋಪಿಯ ಮೇಲೆ ಮಾಡಿದ ಆರೋಪಣೆಯನ್ನು ಸಾಬೀತುಪಡಿಸಲು ಅಭಿಯೋಜನೆಯು ಆರೋಪಿ ಮೇಲೆ ಮಾಡಿದ ಆರೋಪಣೆಯನ್ನು ಸಾಭೀತುಪಡಿಸಲು ಅಭಿಯೋಜನೆಯು ಚಾಸಾ-1 ರವರನ್ನು ಪ್ರಾಸಾ.1 ಎಂದು, ಚಾಸಾ.2 ರವರನ್ನು ಪ್ರಾಸಾ.2 ಎಂದು ಸಾಕ್ಷಿಗೆ ಒಳಪಡಿಸಿ, ನಿಪಿ.1 ರಿಂದ 3 ದಾಖಲೆಗಳನ್ನು ನಿಶಾನೆಯಾಗಿ ಗುರುತಿಸಿಕೊಂಡಿರುತ್ತಾರೆ. ದೂರುದಾರರು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿದ್ದು, ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡುವುದರಿಂದ ಯಾವುದೇ ಪ್ರಯೋಜನವಿಲ್ಲವೆಂದು ಪರಿಗಣಿಸಿ, ಇತರೆ ಸಾಕ್ಷಿದಾರರಿಗೆ ಸಮನ್ಸ್ ನೀಡುವ ಅಭಿಯೋಜನೆಯ ಕೋರಿಕೆಯನ್ನು ನಿರಾಕರಿಸಲಾಯಿತು. ಆದ್ದರಿಂದ ಆರೋಪಿಯನ್ನು ಭಾ.ದಂ.ಸಂ.ಕಲಂ.313 ರ ಅಡಿಯಲ್ಲಿ ವಿಚಾರಣೆಗೆ ಒಳಪಡಿಸಿರುವುದಿಲ್ಲ.

**6**. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಮತ್ತು ಮಾನ್ಯ ಆರೋಪಿ ಪರ ವಕೀಲರ ವಾದವನ್ನು ಆಲಿಸಿ ಕಡತವನ್ನು ಕೂಲಂಕುಷವಾಗಿ ಪರಿಶೀಲಿಸಿದ್ದೇನೆ.

**7**. ಈಗ ನಿರ್ಣಯಿಸಬೇಕಾದ ಅಂಶಗಳು ಈ ಕೆಳಗಿನಂತಿವೆ.

**ಅಂಶಗಳು**

1. **ಅಭಿಯೋಜನೆಯವರು ಆರೋಪಿಯು ಭಾರತ ದಂಡ ಸಂಹಿತೆ ಕಲಂ.341 ರಡಿಯಲ್ಲಿ ಅಪರಾಧ ಮಾಡಿದ್ದಾರೆಂದು ಸಂಶಯಾತೀತವಾಗಿ ರುಜುವಾತುಪಡಿಸುತ್ತಾರೆಯೇ ?**
2. **ಅಭಿಯೋಜನೆಯವರು ಆರೋಪಿಯು ಭಾರತ ದಂಡ ಸಂಹಿತೆ ಕಲಂ.504 ರಡಿಯಲ್ಲಿ ಅಪರಾಧ ಮಾಡಿದ್ದಾರೆಂದು ಸಂಶಯಾತೀತವಾಗಿ ರುಜುವಾತುಪಡಿಸುತ್ತಾರೆಯೇ ?**
3. **ಅಭಿಯೋಜನೆಯವರು ಆರೋಪಿಯು ಭಾರತ ದಂಡ ಸಂಹಿತೆ ಕಲಂ.323 ರಡಿಯಲ್ಲಿ ಅಪರಾಧ ಮಾಡಿದ್ದಾರೆಂದು ಸಂಶಯಾತೀತವಾಗಿ ರುಜುವಾತುಪಡಿಸುತ್ತಾರೆಯೇ ?**
4. **ಅಭಿಯೋಜನೆಯವರು ಆರೋಪಿಯು ಭಾರತ ದಂಡ ಸಂಹಿತೆ ಕಲಂ.324 ರಡಿಯಲ್ಲಿ ಅಪರಾಧ ಮಾಡಿದ್ದಾರೆಂದು ಸಂಶಯಾತೀತವಾಗಿ ರುಜುವಾತುಪಡಿಸುತ್ತಾರೆಯೇ ?**
5. **ಅಭಿಯೋಜನೆಯವರು ಆರೋಪಿಯು ಭಾರತ ದಂಡ ಸಂಹಿತೆ ಕಲಂ.506 ರಡಿಯಲ್ಲಿ ಅಪರಾಧ ಮಾಡಿದ್ದಾರೆಂದು ಸಂಶಯಾತೀತವಾಗಿ ರುಜುವಾತುಪಡಿಸುತ್ತಾರೆಯೇ ?**
6. **ಯಾವ ಆದೇಶ ?**

**8.** ಮೇಲ್ಕಂಡ ಅಂಶಗಳಿಗೆ ನನ್ನ ನಿರ್ಣಯಗಳು ಕೆಳಗಿನಂತೆ ಇವೆ.

**ಅಂಶ ನಂ.1 ರಿಂದ 5 . ನಕಾರಾತ್ಮಕವಾಗಿ**

**<u>ಅಂಶ ನಂ.6</u> . ಅಂತಿಮ ಆದೇಶದಂತೆ ಕೆಳಕಂಡ ಕಾರಣಗಳಿಗಾಗಿ.**

## <u>ಕಾರಣಗಳು</u>

9. **<u>ಅಂಶ ನಂ.1 ರಿಂದ 5</u>**:- 1 ರಿಂದ 5 ಅಂಶಗಳು ಒಂದಕ್ಕೊಂದು ಸಂಬಂಧವಿರುವುದರಿಂದ ಅವುಗಳನ್ನು ಒಟ್ಟಿಗೆ ಚರ್ಚಿಸಲು ಕೈಗೊಳ್ಳಲಾಯಿತು.

10. ಅಭಿಯೋಜಕರು ಆರೋಪಣೆಯನ್ನು ಸಾಬೀತುಪಡಿಸಲು ಈ ಪ್ರಕರಣದಲ್ಲಿ ದೂರುದಾರರಾದ ಚಾಸಾ.1/ಪ್ರಾಸಾ.1-ಸ್ವಾಮಿ ರವರನ್ನು ಸಾಕ್ಷಿಗೆ ಒಳಪಡಿಸಿರುತ್ತಾರೆ. ಈ ಸಾಕ್ಷಿ ತಮ್ಮ ಮುಖ್ಯ ವಿಚಾರಣೆಯಲ್ಲಿ ಚಾಸಾ-2 ತನ್ನ ಹೆಂಡತಿ ಇದ್ದು, ಆರೋಪಿತನ ಪರಿಚಯ ಇದ್ದು, ತಮ್ಮ ಮತ್ತು ಆರೋಪಿ ನಡುವೆ ಯಾವುದೇ ಗಲಾಟೆಯಾಗಿರುವುದಿಲ್ಲ. ಆರೋಪಿತ ತನಗೆ ಅವಾಚ್ಯಶಬ್ದಗಳಿಂದ ಬೈದಿರುವುದಿಲ್ಲ ಮತ್ತು ಕೊಲೆ ಬೆದರಿಕೆ ಹಾಕಿರುವುದಿಲ್ಲ. ದೊಣ್ಣೆಯಿಂದ ಹಲ್ಲೆ ಮಾಡಿರುವುದಿಲ್ಲ, ಕೈಯಿಂದ ಹೊಡೆದಿರುವುದಿಲ್ಲ ಮತ್ತು ತನ್ನ ಕತ್ತಿನ ಪಟ್ಟಿ ಹಿಡಿದು ಎಳೆದಿರುವುದಿಲ್ಲ. ತನ್ನ ಮತ್ತು ಆರೋಪಿತನ ನಡುವೆ ಬಾಯಿಮಾತಿನ ಚಕಾಮಕಿಯಾಗಿದ್ದು ಈ ಬಗ್ಗೆ ಪೊಲೀಸ್ ಠಾಣೆಗೆ ಹೋಗಿ ಈ ಬಗ್ಗೆ ತಿಳಿಸಿದ್ದು ಆ ಸಮಯದಲ್ಲಿ ಪೊಲೀಸರು ತನ್ನ ಸಹಿಯನ್ನು ಪಡೆದಿದ್ದು, ಅದರಲ್ಲಿ ಏನು ಬರೆದಿರುತ್ತದೆ ಎಂದು ತನಗೆ ಗೊತ್ತಿಲ್ಲ. ಪೊಲೀಸರು ಯಾವುದೇ ಪಂಚನಾಮೆಯನ್ನು ತಯಾರಿಸಿರುವುದಿಲ್ಲ ಮತ್ತು ಪಂಚನಾಮೆ ಕಾಲಕ್ಕೆ ಯಾವುದೇ ದೊಣ್ಣೆಯನ್ನು ಅಮಾನತ್ತುಪಡಿಸಿರುವುದಿಲ್ಲ. ಸದರಿ ಪ್ರಾಸಾ.1 ರವರು ನಿಪಿ.1 ದೂರು ಮತ್ತು ನಿಪಿ.2 ಪಂಚನಾಮೆ ಹಾಗೂ ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ನಿಪಿ-2 ರಲ್ಲಿ ಏನು ಬರೆದಿರುತ್ತದೆ ಎಂದು ತನಗೆ ಗೊತ್ತಿಲ್ಲ. ಪೊಲೀಸರ

ಕೋರಿಕೆ ಮೇರೆಗೆ ತಾನು ಪೊಲೀಸ್ ಠಾಣೆಯಲ್ಲಿ ನಿಪಿ-2 ಕ್ಕೆ ಸಹಿ ಮಾಡಿರುವುದಾಗಿ ವ್ಯತಿರಿಕ್ತವಾಗಿ ನುಡಿದಿರುತ್ತಾರೆ. ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾಡಿದ ಪಾಟೀ ಸವಾಲಿನಲ್ಲಿ ತಾವು ಆರೋಪಿಯೊಂದಿಗೆ ರಾಜಿ ಮಾಡಿಕೊಂಡಿರುವುದಾಗಿ ನುಡಿದಿರುತ್ತಾರೆ. ಉಳಿದಂತೆ ಸೂಚಿಸಿದ ಎಲ್ಲಾ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ. ಅಭಿಯೋಜನೆಯು ದೂರುದಾರರಾದ ಫ್ರಾಸಾ.1 ರವರನ್ನು ಪಾಟೀ ಸವಾಲು ಮಾಡಿದರೂ ಪ್ರಕರಣವನ್ನು ಬೆಂಬಲಿಸುವಂತಹ ಯಾವುದೇ ಅಂಶಗಳನ್ನು ಹೊರತರಿಸತುವಲ್ಲಿ ಅಭಿಯೋಜನೆಯು ವಿಫಲಗೊಂಡಿದೆ.

**11**. ಚಾಸಾ.2/ಫ್ರಾಸಾ.2-ಅನಿತಾ ಇವರು ತನ್ನ ಮುಖ್ಯ ವಿಚಾರಣೆಯಲ್ಲಿ ಚಾಸಾ-1 ತನ್ನ ಗಂಡನಿದ್ದು, ಆರೋಪಿಯ ಪರಿಚಯವಿದ್ದು, ತಮ್ಮಗಳ ಮತ್ತು ಆರೋಪಿ ನಡುವೆ ಯಾವುದೇ ಗಲಾಟೆಯಾಗಿರುವುದಿಲ್ಲ. ಆರೋಪಿಯು ಚಾಸಾ-1ರವರಿಗೆ ಮತ್ತು ತನಗೆ ಅವಾಚ್ಯಶಬ್ದಗಳಿಂದ ಬೈದಿರುವುದಿಲ್ಲ, ಕೊಲೆ ಬೆದರಿಕೆ ಹಾಕಿರುವುದಿಲ್ಲ. ದೊಣ್ಣೆಯಿಂದ ಹಲ್ಲೆ ಮಾಡಿರುವುದಿಲ್ಲ, ಕೈಯಿಂದ ಹೊಡೆದಿರುವುದಿಲ್ಲ ಮತ್ತು ಚಾಸಾ-1ರವರ ಕತ್ತಿನ ಪಟ್ಟಿ ಹಿಡಿದು ಎಳೆದಿರುವುದಿಲ್ಲ. ತಾನು ಈ ಕುರಿತು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದು ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುತ್ತಾರೆ ಹಾಗೂ ತಾವು ಆರೋಪಿಗಳೊಂದಿಗೆ ರಾಜಿ ಮಾಡಿಕೊಂಡಿರುವುದಾಗಿ ನುಡಿದಿರುತ್ತಾರೆ.

**12.** ಅಭಿಯೋಜನೆಯ ಪರ ಹಾಜರುಪಡಿಸಲಾದ ಸಾಕ್ಷ್ಯಾದಾರಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ವಿಶ್ಲೇಷಿಸಿ ನೋಡಿದಾಗ ಸ್ವತಃ ದೂರುದಾರರು ಅಭಿಯೋಜನೆಯ ಪರ ಸಾಕ್ಷಿ ನುಡಿಯದೇ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿರುತ್ತಾರೆ

ಹಾಗೂ ತಾನು ಆರೋಪಿಯೊಂದಿಗೆ ರಾಜಿ ಮಾಡಿಕೊಂಡಿರುವುದಾಗಿ ನುಡಿದಿರುತ್ತಾರೆ. ಆದ್ದರಿಂದ ಅಭಿಯೋಜನೆಯು ತಮ್ಮ ಪ್ರಕರಣವನ್ನು ಸಾಬೀತುಪಡಿಸಲು ವಿಫಲಗೊಂಡಿರುತ್ತದೆ. ಈ ಎಲ್ಲಾ ಕಾರಣಗಳಿಂದ ಅಭಿಯೋಜನೆಯು ತಮ್ಮ ಪ್ರಕರಣವನ್ನು ನಿಸ್ಸಂಶಯಾತೀತವಾಗಿ ರುಜುವಾತು ಪಡಿಸಲು ವಿಫಲವಾಗಿದೆ ಎಂದು ಪರಿಗಣಿಸಿ ಆರೋಪಿಯನ್ನು ಶಿಕ್ಷಿಸುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ನಿರ್ದರಿಸಿ ಮೇಲ್ಕಂಡ 1 ರಿಂದ 5 ನೇ ಅಂಶಗಳನ್ನು ನಕಾರಾತ್ಮಕವಾಗಿ ಉತ್ತರಿಸುತ್ತೇನೆ.

13. **<u>ಅಂಶ ನಂ.6 –</u>** ಅಂಶ 1 ರಿಂದ 5 ರಲ್ಲಿ ವಿವರಿಸಿದ ಕಾರಣದಿಂದ ಅಭಿಯೋಜನೆಯವರು ಆರೋಪಿಯ ಮೇಲೆ ಮಾಡಿದ ಆರೋಪಣೆಯನ್ನು ಸಾಬೀತು ಮಾಡಲು ವಿಫಲರಾಗಿರುತ್ತಾರೆಂದು ತೀರ್ಮಾನಿ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## <u>ಆದೇಶ</u>

ದಂಡ ಪ್ರಕ್ರಿಯಾ ಸಂಹಿತೆ ಕಲಂ.248(1)ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ ಆರೋಪಿಯನ್ನು ಭಾರತ ದಂಡ ಸಂಹಿತೆ ಕಲಂ.341, 504, 323, 324 ಮತ್ತು 506 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳಿಂದ ದೋಷ ಮುಕ್ತಗೊಳಿಸಿ ನಿರ್ದೋಷಿಯೆಂದು ನಿರ್ಣಯಿಸಿ ಅವರನ್ನು ಬಿಡುಗಡೆ ಆದೇಶ ಮಾಡಲಾಗಿದೆ.

ಆರೋಪಿ ಮತ್ತು ಜಾಮೀನುದಾರ ಬರೆದುಕೊಟ್ಟಿರುವ ಜಾಮೀನು ಮುಚ್ಚಳಿಕೆಯನ್ನು ರದ್ದುಪಡಿಸಲಾಗಿದೆ.

ಪಿ.ಎಫ್.ಸಂಖ್ಯೆ320/2017 ರಲ್ಲಿ ನಮೂದಿಸಿರುವ ಒಂದು ಕಾಡು ಜಾತಿಯ ದೊಣ್ಣೆಯು ಬೆಲೆ ಬಾಳದ ವಸ್ತುವಾದ್ದರಿಂದ

ಅದನ್ನು ಮೇಲ್ಮನವಿಯ ಅವಧಿ ಮುಗಿದ ನಂತರ ನಾಶಪಡಿಸುವಂತೆ ಕಚೇರಿಗೆ ಆದೇಶಿಸಲಾಗಿದೆ.

(ಶೀಘ್ರಲಿಗಾರರಿಗೆ ಗಣಕ ಯಂತ್ರದ ಮೂಲಕ ನೇರವಾಗಿ ಬೆರಳಚ್ಚು ಮಾಡಿಸಿ ಓದಿ ತಿದ್ದಿ ಇಂದು ಅಂದರೆ ದಿನಾಂಕ. **3 ನೇ ಆಗಸ್ಟ್ ಮಾಹೆ 2026** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು )

Digitally signed by DHANURAJ S M
Location: PRL.CIVIL JUDGE AND JMFC., PERIYAPATNA.

**(ಧನುರಾಜ್ ಎಸ್.ಎಮ್)**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರ. ದ. ನ್ಯಾ ದಂ.**

**ಪಿರಿಯಾಪಟ್ಟಣ**

## ಅನುಬಂಧ

**1) ಅಭಿಯೋಜನೆಯ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರುಗಳ ಪಟ್ಟಿಃ**

ಫ್ರಾಸಾ -1 ಸ್ವಾಮಿ

ಫ್ರಾಸಾ -2 ಅನಿತಾ

**2)ಅಭಿಯೋಜನೆಯ ಪರ ನಿಶಾನೆಯಾಗಿ ಗುರುತಿಸಲಾದ ದಾಖಲೆಗಳ ಪಟ್ಟಿಃ**

ನಿಪಿ-1 ದೂರು

ನಿಪಿ-1(ಎ) ಫ್ರಾಸಾ-1 ರವರ ಸಹಿ

ನಿಪಿ 2 ಸ್ಥಳ ಮಹಜರ್

ನಿಪಿ 2(ಎ) ಫ್ರಾಸಾ.1 ರವರ ಸಹಿ

ನಿಪಿ 3 ಫ್ರಾಸಾ.2 ರವರ ಹೇಳಿಕೆ

**3) ಅಭಿಯೋಜನೆಯ ಪರ ಗುರುತಿಸಲಾದ ಮುದ್ದೆ ಮಾಲುಗಳ ಪಟ್ಟಿಃ**

- ಇಲ್ಲ -

**4) ಆರೋಪಿಯ ಪರ ವಿಚಾರಿಸಲ್ಪಟ್ಟ ಸಾಕ್ಷಿದಾರರು ಮತ್ತು ನಿಶಾನೆಯಾಗಿ ಗುರುತಿಸಲ್ಪಟ್ಟ ದಾಖಲಾತಿಗಳ ವಿವರಃ-** – ಇಲ್ಲ –

Digitally signed by DHANURAJ S M
Location: PRL.CIVIL JUDGE AND JMFC., PERIYAPATNA.

**(ಧನುರಾಜ್ ಎಸ್.ಎಮ್)**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರ. ದ. ನ್ಯಾ ದಂ.**

**ಪಿರಿಯಾಪಟ್ಟಣ**